Total No. of Questions : 55 ]

Total No. of Printed Pages : 7 ]

Code No. **01**

**March, 2011**

# KANNADA

Time : 3 Hours 15 Minutes ] [ Max. Marks : 100

## ಅ- ವಿಭಾಗ

I. ಕೆಳಗಿನ ಎಲ್ಲಾ ಪ್ರಶ್ನೆಗಳಿಗೆ ಒಂದೊಂದು ಪೂರ್ಣ ವಾಕ್ಯದಲ್ಲಿ ಉತ್ತರಿಸಿ : $10 \times 1 = 10$

1) ಹುಲು ಹುಳ್ಳಿಯನ್ನು ತರಲು ಕಾಡಿಗೆ ಹೋದ ಬಾಲಕನ ಹೆಸರೇನು ?

2) ಅರಸರು ಚಂದದಿಂದ ಮೆರೆಯುವುದು ಹೇಗೆ ?

3) ಪುರುಷೋತ್ತಮನ ಪಾದಪೂಜೆಯ ಫಲ ಎಂಥ ದಂಪತಿಗಳಿಗೆ ದೊರಕುವುದು ?

4) ಮೈಯೊಳಗೆ ರಕ್ತವನ್ನೇಕೆ ತುಂಬಿಕೊಂಡಿದ್ದೇವೆ ?

5) ಕಾದರ್‌ನ ಹೆಂಡತಿ ಯಾರು ?

6) ಯಾವುದು ರೋಗದ ಮಾರ್ಗವೆಂದು ಡಿ.ಆರ್. ನಾಗರಾಜ್ ಹೇಳಿದ್ದಾರೆ ?

7) ಪವಿತ್ರ ಕೆಲಸ ಯಾವುದೆಂದು ಲೇಖಕರು ಹೇಳುತ್ತಾರೆ ?

8) ಯಾರ ಸುದ್ದಿಗೆ ರಾಜ ಬರಬಾರದೆಂದು ಗಾಳಣ್ಣ ಹೇಳುತ್ತಾನೆ ?

9) ಬಿಲ್ವಿದ್ಯೆಯನ್ನು ಯಾವುದಕ್ಕಾಗಿ ಬಳಸಿಕೊಳ್ಳಬಹುದೆಂದು ಅಶ್ವತ್ಥಾಮ ಹೇಳುತ್ತಾನೆ ?

10) ರಣರಂಗದಲ್ಲಿ ಚೆನ್ನಾಗಿ ಹೋರಾಡಬೇಕಾದರೆ ಏನು ಮಾಡಬೇಕೆಂದು ಸೈನಿಕನು ಹೇಳುತ್ತಾನೆ ?

[ Turn over

## ಆ – ವಿಭಾಗ

II. ಅ) ಕೆಳಗಿನ ಯಾವುದಾದರೂ ನಾಲ್ಕು ಪ್ರಶ್ನೆಗಳಿಗೆ ಎರಡು-ಮೂರು ವಾಕ್ಯಗಳಲ್ಲಿ ಉತ್ತರಿಸಿ : 4 × 2 = 8

11) ಕಾಯಕವನ್ನು ಹೇಗೆ ಮಾಡಬೇಕು ? ಅದರ ಪ್ರತಿಫಲವೇನೆಂದು ಲಕ್ಕಮ್ಮ ಹೇಳುತ್ತಾಳೆ ?

12) ಸೈನಿಕರು ಮತ್ತು ವ್ಯಾಪಾರಿಗಳು ಹೊಟ್ಟೆಪಾಡಿಗಾಗಿ ಏನೇನು ಮಾಡುತ್ತಾರೆಂದು ಕನಕದಾಸರು ಹೇಳಿದ್ದಾರೆ ?

13) ಮಡದಿಯನ್ನು ಹೇಗೆ ಒಲಿಸಿಕೊಳ್ಳಬೇಕೆಂದು ಹೊನ್ನಮ್ಮ ಹೇಳುತ್ತಾಳೆ ?

14) ಪಾಂಡವರನ್ನು ಕುಕ್ಕುತ್ತಿರುವವಳು ಯಾರು ? ಅವಳ ಕೆಲಸವೇನು ?

15) ಪೆಟ್ರೊಮ್ಯಾಕ್ಸ್ ಹೊತ್ತವರ ಕುದಿಯನ್ನು ಹೇಗೆ ಬಣ್ಣಿಸಲಾಗಿದೆ ?

ಆ) ಕೆಳಗಿನ ಯಾವುದಾದರೂ ಮೂರು ಪ್ರಶ್ನೆಗಳಿಗೆ ಎರಡು-ಮೂರು ವಾಕ್ಯಗಳಲ್ಲಿ ಉತ್ತರಿಸಿ : 3 × 2 = 6

16) ಕುವೆಂಪು ಅವರು ಯಾವುದಕ್ಕೆ ಸಂಪೂರ್ಣ ವಿದಾಯ ಹೇಳಿದ್ದರು ?

17) ಕಾರಿನ ಚಾಲಕಿಯ ಸೌಂದರ್ಯವನ್ನು ಲೇಖಕರು ಹೇಗೆ ವಿವರಿಸಿದ್ದಾರೆ ?

18) ಅನಿಸ್ಸಾಳ ತಂದೆ-ತಾಯಿಗಳು ಸೂಕ್ತ ಮಜ್ಜಾರಸ ದಾನಿಗಳಿಗಾಗಿ ಹೇಗೆ ಹುಡುಕಿದರು ?

19) ಸೆಟ್ಟಿಯು ರಾಜನಿಗೆ ಏನೆಂದು ದೂರಿದನು ?

ಇ) ಕೆಳಗಿನ ಯಾವುದಾದರೂ **ಮೂರು** ಪ್ರಶ್ನೆಗಳಿಗೆ ಎರಡು-ಮೂರು ವಾಕ್ಯಗಳಲ್ಲಿ ಉತ್ತರಿಸಿ : $3 \times 2 = 6$

20) ಮರವನ್ನು ಕುರಿತು ಶೆಟ್ಟಿ ಹೇಳುವ ಮಾತುಗಳಾವುವು ?

21) ಏಕಲವ್ಯ ನಾಡಿಗೆ ಹೋಗಿ ಬಿಲ್ವಿದ್ಯೆ ಕಲಿಯಬೇಕೆಂದು ತಾಯಿ ಹೂಡಿದ ವಾದ ಯಾವುದು ?

22) ಕೃಷ್ಣನ ಬಗೆಗೆ ಅರ್ಜುನ ಯಾವ ಭಾವನೆ ಹೊಂದಿದ್ದಾನೆ ?

23) ಏಕಲವ್ಯ ನಿಜವಾದ ವೀರನೆಂದು ಅರ್ಜುನನು ಹೇಗೆ ಹೇಳಿದ್ದಾನೆ ?

## ಇ – ವಿಭಾಗ

III. ಅ) ಕೆಳಗಿನ ಯಾವುದಾದರೂ **ಎರಡು** ವಾಕ್ಯಗಳನ್ನು ಕುರಿತು ಸಂದರ್ಭ ಸೂಚಿಸಿ, ಸ್ವಾರಸ್ಯಗಳನ್ನು ಬರೆಯಿರಿ : $2 \times 3 = 6$

24) ಎಲವೊ ಮರುಳೆ ಬರ್ದುಕಲ್ ಬಗೆವಾ.

25) ಉಗ್ರಾಹಿಂಗಾಹುತಿಯಾದನೆಂದು ಪೇಳ್ವೆನೆ ?

26) ನಿರಾಶೆ, ನಿರ್ಲಕ್ಷ್ಯ ಹಸುಕಂದನಿಗೆ ಹೇಗೆ ಅರ್ಥವಾಗುವುದು ?

ಆ) ಕೆಳಗಿನ ಯಾವುದಾದರೂ **ಒಂದು** ವಾಕ್ಯವನ್ನು ಕುರಿತು ಸಂದರ್ಭ ಸೂಚಿಸಿ, ಸ್ವಾರಸ್ಯವನ್ನು ಬರೆಯಿರಿ : $1 \times 3 = 3$

27) ಯಾ ಅಲ್ಲಾ, ನನ್ನನ್ನು ಯಾಕಾದರೂ ಇನ್ನೂ ಉಳಿಸಿದ್ದೀಯಾ ?

28) ಅದು ನನ್ನ ತಪ್ಪು ತಾನೇ ?

ಇ) ಕೆಳಗಿನ ಯಾವುದಾದರೂ ಒಂದು ವಾಕ್ಯವನ್ನು ಕುರಿತು ಸಂದರ್ಭ ಸೂಚಿಸಿ, ಸ್ವಾರಸ್ಯವನ್ನು ಬರೆಯಿರಿ : $1 \times 3 = 3$

29) ಬಿಲ್ಲು ವಿದ್ಯೆ ಬೇಡರ ಹುಟ್ಟುಗುಣ.

30) ವಿದ್ಯೆಗೆ ಅಂತಸ್ತಿನ ಅಂತರವಿಲ್ಲ.

## ಈ - ವಿಭಾಗ

IV. ಅ) ಕೆಳಗಿನ ಯಾವುದಾದರೂ ಮೂರು ಪ್ರಶ್ನೆಗಳಿಗೆ ಐದಾರು ವಾಕ್ಯಗಳಲ್ಲಿ ಉತ್ತರಿಸಿ : $3 \times 4 = 12$

31) ಮಾನವರ ಅಹಂಕಾರವನ್ನು ದಾಸಿಮಯ್ಯ ಹೇಗೆ ವಿಡಂಬಿಸಿದ್ದಾನೆ ?

32) ಕಾಡಿನಲ್ಲಿ ಮಗನಿಗೇನಾಗಿರಬಹುದೆಂದು ಚಂದ್ರಮತಿ ಕಲ್ಪಿಸಿಕೊಂಡಳು ? ವಿವರಿಸಿ.

33) 'ಭೀಮಾಲಾಪ' ಪದ್ಯದಲ್ಲಿ ವ್ಯಕ್ತವಾಗುವ ಭೀಮನ ಹಳೆಯ ನೆನಪುಗಳು ಯಾವುವು ?

34) ಎಲುಬಿನ ಹಂದರದೊಳಗೆ ಕವನವು ಮತ ಧರ್ಮಕ್ಕೂ ಮಾನವ ಧರ್ಮಕ್ಕೂ ಇರುವ ಸಂಬಂಧವನ್ನು ಹೇಗೆ ಚಿತ್ರಿಸಿದೆ ? ವಿವರಿಸಿ.

ಆ) ಕೆಳಗಿನ ಯಾವುದಾದರೂ ಎರಡು ಪ್ರಶ್ನೆಗಳಿಗೆ ಐದಾರು ವಾಕ್ಯಗಳಲ್ಲಿ ಉತ್ತರಿಸಿ : $2 \times 4 = 8$

35) ಕುವೆಂಪು ಅವರಿಗೆ ದೇವರು ಮತ್ತು ವಿಜ್ಞಾನದ ಬಗ್ಗೆ ಇದ್ದ ಅಭಿಪ್ರಾಯಗಳನ್ನು ಲೇಖಕರು ಹೇಗೆ ವಿವರಿಸಿದ್ದಾರೆ ?

36) ಸಂಸ್ಕೃತಿ ಹಾಗೂ ರಾಜಕೀಯ ಕುರಿತಂತೆ ನಿಷೆಯ ವಿಚಾರಗಳಾವುವು ?

37) ಸುಮತಿಯು ಕಳ್ಳನನ್ನು ಪತ್ತೆ ಮಾಡಲು ಹೇಳಿದ ಕಥೆಯ ಸ್ವಾರಸ್ಯವೇನು ?

ಇ) ಕೆಳಗಿನ ಯಾವುದಾದರೂ **ಎರಡು** ಪ್ರಶ್ನೆಗಳಿಗೆ ಐದಾರು ವಾಕ್ಯಗಳಲ್ಲಿ ಉತ್ತರಿಸಿ : $2 \times 4 = 8$

38) ಏಕಲವ್ಯನ ಸಾಹಸಗಳನ್ನು ಮೇಳದವರು ಹೇಗೆ ಬಣ್ಣಿಸಿದ್ದಾರೆ ?

39) ಪರಂಪರಾಗತ ಲೋಕ ವ್ಯವಸ್ಥೆಯನ್ನು ಸಮರ್ಥಿಸಿ ಭೀಷ್ಮಾಚಾರ್ಯ ಹೇಳುವ ಮಾತುಗಳನ್ನು ವಿವರಿಸಿ.

40) ಏಕಲವ್ಯನು ತನ್ನ ಮತ್ತು ಕರ್ಣನಲ್ಲಿರುವ ವ್ಯತ್ಯಾಸವನ್ನು ಹೇಗೆ ವಿವರಿಸುತ್ತಾನೆ ?

## ಉ – ವಿಭಾಗ

V. ಅ) ಕೆಳಗಿನ ಯಾವುದಾದರೂ **ಒಂದು** ಪದ್ಯದ ಭಾವಾರ್ಥವನ್ನು ಬರೆಯಿರಿ : $1 \times 5 = 5$

41) ಆ ರವಮಂ ನಿರ್ಜಿತ ಕಂ
ಠೀರವ ರವಮಂ ನಿರಸ್ತಘನ ರವಮಂ ಕೋ
ಪಾರುಣ ನೇತ್ರಂ ಕೇಳ್ದಾ
ನೀರೊಳಗಿರ್ದುಂ ಬೆಮರ್ತನುರಗ ಪತಾಕಂ.

ಅಥವಾ

42) ಓ ಶ್ವೇತಕನ್ಯೆ ಕಲಿಸುವೆನು ಬಾರೆ ಶೃಂಗಾರ ಸಾರವನ್ನು
ಕುಂಕುಮವನಿಡುವೆ ಬಿಡು ಕೆಂಪು ಕೇಡು ಎಂಬೀ ವಿಚಾರವನ್ನು
ಅರಿಸಿನವ ತೊಡೆವೆ ತೊಡೆ ಹಳದಿ ತ್ಯಾಜ್ಯವೆಂದೆಂಬ ವಾದವನ್ನು
ಹಚ್ಚುವೆನು ಕಣ್ಗೆ ಕಾಡಿಗೆಯ ನೋಡು ದರ್ಪಣದಿ ರೂಪವನ್ನು !

ಆ) **ಭಾಷಾಭ್ಯಾಸ**

ಕೆಳಗಿನ ಪ್ರಶ್ನೆಗಳಲ್ಲಿ ಯಾವುದಾದರೂ ಆರಕ್ಕೆ ಆಯಾ ಸೂಚನೆಗೆ ಅನುಗುಣವಾಗಿ ಉತ್ತರ ಬರೆಯಿರಿ : $6 \times 2 = 12$

43) ಈ ಪದಗಳಿಗೆ ಅರ್ಥಗಳನ್ನು ಬರೆಯಿರಿ :

ವಿಹಗ, ಬಿಜಲಿ.

44) ಈ ಪದಗಳಿಗೆ ವಿಭಕ್ತಿ ಪ್ರತ್ಯಯಗಳನ್ನು ಬರೆಯಿರಿ :

ಕಾಂತಾರದೊಳ್, ಸುದತ್ತನ.

45) ಈ ಪದಗಳಿಗೆ ಸಮಾನಾರ್ಥಕ ಪದಗಳನ್ನು ಬರೆಯಿರಿ :

ತನುಜ, ಇನ.

46) ಈ ತತ್ಸಮ ಪದಗಳಿಗೆ ತದ್ಭವಗಳನ್ನು ಬರೆಯಿರಿ :

ಘುಟಿಕಾ, ವಲ್ಲಿ.

47) ಈ ಪದಗಳ ನಿಷೇಧಾರ್ಥ ರೂಪಗಳನ್ನು ಬರೆಯಿರಿ :

ಹೋಗುತ್ತಾಳೆ, ನೋಡುವರು.

48) ಈ ಪದಗಳ ಕಾಲವನ್ನು ತಿಳಿಸಿ :

ಓದುತ್ತೀರಿ, ಉಂಡರು.

49) ಈ ದ್ವಿರುಕ್ತಿಗಳನ್ನು ಸ್ವಂತ ವಾಕ್ಯದಲ್ಲಿ ಪ್ರಯೋಗಿಸಿ :

ಹಂತಹಂತ, ಒಂದೊಂದು.

ಇ) ಕೆಳಗಿನ ಯಾವುದಾದರೂ **ಒಂದನ್ನು** ಕುರಿತು 15 ವಾಕ್ಯಗಳಿಗೆ ಮೀರದಂತೆ ಒಂದು ಪ್ರಬಂಧವನ್ನು ಬರೆಯಿರಿ : $1 \times 5 = 5$

50) ಸಾಂಸ್ಕೃತಿಕ ಚಟುವಟಿಕೆಗಳು

51) ಸಾರ್ವಜನಿಕ ಆಸ್ತಿ

ಈ) **ಪತ್ರಲೇಖನ**

ಈ ಕೆಳಗಿನ ಯಾವುದಾದರೂ **ಒಂದನ್ನು** ಕುರಿತು ಪತ್ರ ಬರೆಯಿರಿ : $1 \times 4 = 4$

52) ನಿಮ್ಮ ಕಾಲೇಜಿನಲ್ಲಿರುವ ಶೈಕ್ಷಣಿಕ ಸೌಲಭ್ಯವನ್ನು ಕುರಿತು ತಾಯಿಯವರಿಗೆ ಒಂದು ಪತ್ರ ಬರೆಯಿರಿ.

53) ನಿಮ್ಮ ಊರಿನಲ್ಲಿರುವ ನದಿ ತೀರದ 'ಪರಿಸರ ಮಾಲಿನ್ಯ'ವನ್ನು ತಡೆಗಟ್ಟುವಂತೆ ಕೋರಿ ಜಿಲ್ಲಾಧಿಕಾರಿಗೆ ಒಂದು ಪತ್ರ ಬರೆಯಿರಿ.

ಉ) ಈ ಕೆಳಗಿನ ಗಾದೆಗಳಲ್ಲಿ **ಒಂದನ್ನು** ವಿಸ್ತರಿಸಿ ಬರೆಯಿರಿ : $1 \times 4 = 4$

54) ಆಯ ನೋಡಿ ಪಾಯ ಹಾಕು.

55) ಪ್ರತ್ಯಕ್ಷ ಕಂಡರೂ ಪ್ರಮಾಣಿಸಿ ನೋಡು.